ಸಿಸಿ. 14206/2012

ಚಾಸಾ.4

ಪ್ರಾಸಾ. 4

**ಸಾಕ್ಷಿಯನ್ನು ದಿಃ 07.11.2024 ರಂದು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ-**

ನನಗೆ ಓದಲು ಬರೆಯಲು ಬರುವುದಿಲ್ಲ. ಚಾಸಾ.1 ಮತ್ತು 1ನೇ ಆರೋಪಿಯ ಮದುವೆ ಹಿರಿಯರು ನಿಶ್ಚಯಿಸಿದ ಮದುವೆಯಾಗಿರುತ್ತದೆ ಎಂದರೆ ಸರಿ. ಮದುವೆಯನ್ನು ಹಿಂದೂ ಸಂಪ್ರದಾಯದ ಪ್ರಕಾರ ಮಾಡಲಾಗಿದೆ ಎಂದರೆ ಸರಿ . ಮದುವೆಯಾದ ನಂತರ ಇಬ್ಬರೂ 1ನೇ ಆರೋಪಿಯ ಗ್ರಾಮವಾದ ಅರೇಕಟ್ಟೆ ದೊಡ್ಡಿಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಮದುವೆಯಾದ ನಂತರ ಸುಮಾರು ಏಳೆಂಟು ವರ್ಷಗಳ ಕಾಲ ಮಗಳು ಮತ್ತು ಅಳಿಯ ಚೆನ್ನಾಗಿದ್ದರು .

1ನೇ ಆರೋಪಿಯು ದುಡ್ಡು ಕಾಸು ತೆಗೆದುಕೊಂಡು ಬಾ ಎಂದು ಪ್ರಾಸಾ.1 ರವರಿಗೆ ಜಗಳ ಮಾಡಿ ಬೈಯುತ್ತಿದ್ದರು. ದುಡ್ಡು ಕಾಸು ಮತ್ತು ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಜಗಳ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿದ್ದೇವೆ. ಯಾವ ದಿನಾಂಕದಂದು 1ನೇ ಆರೋಪಿಯು ವರದಕ್ಷಿಣೆ ಕೇಳಿ ಜಗಳ ಮಾಡುತ್ತಿದ್ದ ಎಂದು ನನಗೆ ಹೇಳಲು ಆಗುವುದಿಲ್ಲ.

1 ಎಕರೆ ಮೂರು ಮುಕ್ಕಾಲು ಗುಂಟೆ ಜಮೀನು ಮಾರಾಟವಾಗುವವರೆಗೆ ಮಗಳು ಮತ್ತು ಅಳಿಯ ಅನ್ಯೋನ್ಯವಾಗಿದ್ದರು ಎಂದರೆ ಸರಿ. ನಾನು ಮತ್ತು ಚಾಸಾ.10 ರವರು ಆಸ್ತಿಯನ್ನು ಬರೆಸಿಕೊಳ್ಳುವಂತೆ ಚಾಸಾ.1 ರವರಿಗೆ ಒತ್ತಾಯ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. 1ನೇ ಆರೋಪಿ ನನ್ನ ಮಗಳ ಶೀಲವನ್ನು ಶಂಕಿಸುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ.1 ರವರ ಮೇಲೆ ಗಲಾಟೆ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ

ಸರಿಯಲ್ಲ. 1ನೇ ಆರೋಪಿಯು ಚಾಸಾ.1 ರವರಿಗೆ ಹೊಡೆದ ದಿನಾಂಕ ಗೊತ್ತಿಲ್ಲ. ನನ್ನ ಮಗಳಿಗೆ ಏಕೆ ಹೊಡೆಯುತ್ತಿದ್ದೀಯಾ ಎಂದು ನಾನು 1ನೇ ಆರೋಪಿಗೆ ಕೇಳಿದ್ದೆ. ಆಗ 1ನೇ ಆರೋಪಿಯು ತಪ್ಪು ಮಾಡಿದ್ದಾರೆ, ಅದಕ್ಕೆ ಹೊಡೆಯುತ್ತಿದ್ದೇನೆಂದು ಹೇಳಿದರು. ತಪ್ಪೇನು ಎಂದು ನಾನು ಕೇಳಿದಾಗ ಆಕೆಗೆ ಬೇರೆ ಕಡೆ ಸಂಬಂಧ ಇದೆ ಎಂದು 1ನೇ ಆರೋಪಿ ಹೇಳಿದರು. ಯಾರ ಜೊತೆ ಸಂಬಂಧ ಇದೆ ಎಂದು 1ನೇ ಆರೋಪಿಯು ಹೇಳಲಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯು ನನ್ನ ಮಗಳಿಗೆ ಕೈಗಳಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯು ನನ್ನ ಮಗಳಿಗೆ ಹೊಡೆದ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿತ್ತು. 1ನೇ ಆರೋಪಿಯು ಚಾಸಾ.1 ರವರಿಗೆ ಹೊಡೆದ ಬಗ್ಗೆ ವೈದ್ಯರಿಂದ ಚಿಕಿತ್ಸೆ ಪಡೆದಿದ್ದೀರಾ ಎಂದರೆ ಸಾಕ್ಷಿಯು ರಕ್ತ ಬರುವಂತೆ ಹೊಡೆದಿರಲಿಲ್ಲ, ಆ ಕಾರಣಕ್ಕಾಗಿ ಚಿಕಿತ್ಸೆ ಕೊಡಿಸಿರುವುದಿಲ್ಲ ಎಂದು ಹೇಳುತ್ತಾರೆ. 1ನೇ ಆರೋಪಿಯು ಚಾಸಾ.1 ರವರಿಗೆ ಹೊಡೆದಿರುವುದಿಲ್ಲ, ಆದ್ದರಿಂದ ಚಾಸಾ.1 ರವರಿಗೆ ಚಿಕಿತ್ಸೆ ಕೊಡಿಸುವ ಸಂದರ್ಭ ಬಂದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಗೆ ವ್ಯವಸಾಯ ಬಿಟ್ಟು ಬೇರೆ ಕೆಲಸ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆತನು ಗಾರ್ಮೆಂಟ್ಸ್ ಗೆ ಕೆಲಸಕ್ಕೆ ಹೋಗುತ್ತಿದ್ದ ಎಂದು ಹೇಳುತ್ತಾರೆ. ನನ್ನ ಮತ್ತು ನನ್ನ ಮಗ ಮತ್ತು ಚಾಸಾ.1 ರವರ ಒತ್ತಾಯದ ಮೇರೆಗೆ 1ನೇ ಆರೋಪಿಯು ಕೆಲಸಕ್ಕೆ ಹೋಗುತ್ತಿದ್ದನು, ಆತನಿಗೆ ಅದು ಸರಿಹೊಂದಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯನ್ನು ನಾನು, ನನ್ನ ಮಗ ಹಾಗೂ ಮಗಳು ಬೆಂಗಳೂರಿಗೆ ಒತ್ತಾಯಪೂರ್ವಕವಾಗಿ ಕರೆತಂದಿದ್ದೆವು ಎಂದರೆ ಸರಿಯಲ್ಲ. 1ನೇ ಆರೋಪಿಗೆ

ಬೆಂಗಳೂರಿನ ಜೀವನ ಹೊಂದಾಣಿಕೆಯಾಗಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1ನೇ ಆರೋಪಿಯು ನನ್ನ ಮಗಳೊಂದಿಗೆ ತನಗೆ ಬೆಂಗಳೂರು ಹೊಂದಾಣಿಕೆ ಆಗುತ್ತಿಲ್ಲ, ಊರಿಗೆ ಹೋಗೋಣ ಎಂದು ಹೇಳಿದಾಗ ಮಗಳ ಮೂಲಕ ಸುಳ್ಳು ದೂರು ಕೊಡಿಸಿದ್ದೇನೆಂದರೆ ಸರಿಯಲ್ಲ. 2ನೇ ಆರೋಪಿಯ ಚಾಡಿ ಮಾತುಗಳನ್ನು ಕೇಳಿ 1ನೇ ಆರೋಪಿಯು ಚಾಸಾ.1 ರವರೊಂದಿಗೆ ಜಗಳ ಆಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2ನೇ ಆರೋಪಿಯ ಗಂಡ ವೈರಮುಡಿ ಗೊತ್ತಿರುತ್ತಾರೆ . 1ನೇ ಆರೋಪಿ ಮತ್ತು ಆತನತಂದೆ ಜಮೀನನ್ನು 2ನೇ ಆರೋಪಿಯ ಗಂಡ ವೈರಮುಡಿಯವರಿಗೆ ಮಾರಟ ಮಾಡಿರುವುದರಿಂದ 2ನೇ ಆರೋಪಿಯನ್ನು ಉದ್ದೇಶಪೂರ್ವಕವಾಗಿ ಈ ಪ್ರಕರಣದಲ್ಲಿ ಸೇರಿಸಿದ್ದೇವೆಂದರೆ ಸರಿಯಲ್ಲ . 2ನೇ ಆರೋಪಿಯ ಇನ್ನು ಇ ಬ್ಬರು ಸಹೋದರಿಯರನ್ನು ಈಪ್ರ ಕರಣದಲ್ಲಿ ಸೇರಿಸಿಲ್ಲಎಂದರೆ ಸರಿಯಲ್ಲ .

ಚಾಸಾ.1 ರವರ ತಾಳಿಯನ್ನು 1ನೇ ಆರೋಪಿಯು ಯಾವ ದಿನಾಂಕ ಕಿತ್ತಿದರು ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ಆಗಿಲ್ಲ, ಆದ ಕಾರಣ ದಿನಾಂಕ ಗೊತ್ತಿಲ್ಲ ಎಂದರೆ ಸರಿಯಲ್ಲ. ದೇವರಚಿಕ್ಕನಹಳ್ಳಿಯಲ್ಲಿ ಇರುವ ನನ್ನ ತಂಗಿಯ ಹೆಸರು ಗೌರಮ್ಮ ಆಗಿರುತ್ತದೆ. ಸದರಿ ಮನೆಯ ಸಂಖ್ಯೆ ಹಾಗೂ ಇತರೆಯನ್ನು ನನಗೆ ಹೇಳಲು ಆಗುವುದಿಲ್ಲ. 1ನೇ ಆರೋಪಿಯು ನನ್ನ ಸಹೋದರಿಯ ಮನೆಗೆ ಹೋಗಿ ತಾಳಿಯನ್ನು ಎಸೆದು ಹೋಗಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಮೈಕೋ ಲೇ ಔಟ್ ಪೊಲೀಸ್ ಠಾಣೆಗೆ ಹೋಗಿಲ್ಲ.

ಸಿಸಿ. 14206/2012

ಚಾಸಾ.4

ಪ್ರಾಸಾ. 4

ಚಾಸಾ.1 ಮತ್ತು 1ನೇ ಆರೋಪಿಯು ಅನ್ಯೋನ್ಯವಾಗಿದ್ದರು ಸಹ ಜಮೀನು ಮಾರಾಟವಾದ ನಂತರ ನಾನು ಮತ್ತು ನನ್ನ ಮಗ ಪರೋಕ್ಷವಾಗಿ ಅವರ ಸಂಸಾರ ಹಾಳು ಆಗಲು ಕಾರಣವಾಗಿದ್ದೇವೆಂದರೆ ಸರಿಯಲ್ಲ. 1 ಮತ್ತು 2ನೇ ಆರೋಪಿಗಳು ಚಾಸಾ.1 ರವರಿಗೆ ಯಾವುದೇ ರೀತಿಯ ತೊಂದರೆ ಕಿರುಕುಳ ನೀಡದೇ ಇದ್ದರೂ ಸಹ ಅವರಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು-ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಮು. ಮ. ಚಂ. ನ್ಯಾ. ಬೆಂ. ನಗರ.